# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1087 |
| ಉತ್ತರಿಸಬೇಕಾದ ದಿನಾಂಕ | 18.12.2024 |
| ಉತ್ತರಿಸಬೇಕಾದ ಸಚಿವರು | ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ ಸಂ | ಮಾನ್ಯ ಸದಸ್ಯರ ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನ ಮುಖ್ಯಮಂತ್ರಿಗಳ ಬಹುಮಹಡಿ ಕಟ್ಟಡಗಳ 1 ಬಿಹೆಚ್‌ಕೆ ಮತ್ತು 2-ಬಿಹೆಚ್‌ಕೆ ವಸತಿ ಗೃಹಗಳನ್ನು ಎಷ್ಟು ವಿಧಾನಸಭಾ ಕ್ಷೇತ್ರಗಳಲ್ಲಿ ಎಷ್ಟು ಸಂಖ್ಯೆಗಳಲ್ಲಿ ನಿರ್ಮಿಸಲಾಗುತ್ತಿದೆ; (ವಿವರ ನೀಡುವುದು) | "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಯಡಿಯಲ್ಲಿ ಒಟ್ಟು 8 ವಿಧಾನ ಸಭಾ ಕ್ಷೇತ್ರಗಳಲ್ಲಿ ವಸತಿ ಗೃಹಗಳ ನಿರ್ಮಾಣ ಕೈಗೊಳ್ಳಲಾಗುತ್ತಿದೆ. ವಿವರ ಈ ಕೆಳಕಂಡಂತಿವೆ. (see table below) |
| ಆ) | ಈ ವಸತಿ ನಿರ್ಮಾಣಕ್ಕೆ ಸರ್ಕಾರ ವಿಧಿಸಿರುವ ಮೊತ್ತವೆಷ್ಟು; ಕೇಂದ್ರ ಸರ್ಕಾರದ ಅನುದಾನ ಎಷ್ಟು; ರಾಜ್ಯ ಸರ್ಕಾರದ ಅನುದಾನ ಎಷ್ಟು; | ಈ ಯೋಜನೆಯನ್ನು ಬೆಂಗಳೂರು ನಗರ ಜಿಲ್ಲೆಯ ಆರ್ಥಿಕ ದುರ್ಬಲ ವರ್ಗದವರಿಗಾಗಿ ಅನುಷ್ಠಾನಗೊಳಿಸುತ್ತಿದ್ದು, ಕೇಂದ್ರ ಸರ್ಕಾರದ PMAY(U) ಯೋಜನೆಯ ಅನುದಾನವನ್ನು ಸಂಯೋಜಿಸಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಪ್ರಸ್ತುತ, ನಿರ್ಮಿಸುತ್ತಿರುವ 45,124 **1BHK** ಮನೆಗಳಿಗೆ ರೂ 5421.00 ಕೋಟಿಗಳು ಅಗತ್ಯವಿದ್ದು, ಇದರಲ್ಲಿ ಕೇಂದ್ರ ಸರ್ಕಾರದಿಂದ ರೂ 676.86 ಕೋಟಿಗಳು ಹಾಗೂ ರಾಜ್ಯ ಸರ್ಕಾರದಿಂದ ರೂ 685.88 ಕೋಟಿಗಳು ಸೇರಿ ಒಟ್ಟು 1362.74 ಕೋಟಿಗಳ ಸಹಾಯಧನ ನೀಡಲಾಗುತ್ತಿದೆ. |

Table for ಅ):

| ಕ್ರಸಂ | ವಿಧಾನಸಭಾ ಕ್ಷೇತ್ರ | 1BHK | 2BHK |
|---|---|---|---|
| 1. | ಆನೇಕಲ್ | 4047 | 1207 |
| 2. | ಬೆಂಗಳೂರುದಕ್ಷಿಣ | 928 | 1040 |
| 3. | ಬ್ಯಾಟರಾಯನಪುರ | 4223 | - |
| 4. | ದಾಸರಹಳ್ಳಿ | 1132 | 135 |
| 5. | ಕೆ.ಆರ್.ಪುರಂ | 576 | 160 |
| 6. | ಮಹದೇವಪುರ | 3967 | 507 |
| 7. | ಯಲಹಂಕ | 18319 | 633 |
| 8. | ಯಶವಂತಪುರ | 11932 | 4414 |
| | **ಒಟ್ಟು** | **45,124** | **8,096** |

<table>
<tr>
<td>ಇ)</td>
<td>ಸದರಿ ವಸತಿ ಸಮುಚ್ಛಯಗಳಲ್ಲಿ ಮನೆಗಳನ್ನು ಯಾವ ಕಾಲಮಿತಿಯೊಳಗೆ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗುವುದು; ಎಷ್ಟು ಜನರಿಗೆ ಹಂಚಿಕೆ ಮಾಡಲಾಗಿದೆ: (ಕ್ಷೇತ್ರವಾರು ಮಾಹಿತಿ ನೀಡುವುದು)</td>
<td>"1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"ಯಡಿಯಲ್ಲಿ ಒಟ್ಟು 45,124 ಮನೆಗಳನ್ನು ಕೈಗೊಳ್ಳಲಾಗುತ್ತಿದ್ದು, ಶೇ.75 ರಷ್ಟು ಮೊತ್ತವನ್ನು ಫಲಾನುಭವಿಗಳಿಂದ ಭರಿಸಬೇಕಾಗಿದೆ.<br><br>ಸದರಿ ವಸತಿ ಸಮುಚ್ಛಯಗಳಲ್ಲಿ ಈಗಾಗಲೇ 4,417 ಮನೆಗಳನ್ನು ಪೂರ್ಣಗೊಳಿಸಲಾಗಿದ್ದು, 421 ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆಮಾಡಲಾಗಿರುತ್ತದೆ. ಉಳಿದ ಮನೆಗಳ ಕಾಮಗಾರಿಯು ಪ್ರಗತಿಯಲ್ಲಿದ್ದು, ಹಂತ ಹಂತವಾಗಿ ಪೂರ್ಣಗೊಳಿಸಿ ಕಾಲ ಕಾಲಕ್ಕೆ ಘಟಕ ವೆಚ್ಚದ ಪೂರ್ಣ ಮೊತ್ತವನ್ನು ಪಾವತಿಸುವ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗುವುದು. ಕ್ಷೇತ್ರವಾರು ಮಾಹಿತಿಯನ್ನು ಈ ಕೆಳಕಂಡಂತೆ ಒದಗಿಸಲಾಗಿದೆ.<br><br>
<table>
<tr><th rowspan="2">ಕ್ರಸಂ</th><th rowspan="2">ವಿಧಾನಸಭಾಕ್ಷೇತ್ರ</th><th colspan="2">ಫಲಾನುಭವಿಗಳಿಗೆ ಹಂಚಿಕೆ ಮಾಡಲಾದ ಮನೆಗಳು</th></tr>
<tr><th>1BHK</th><th>2BHK</th></tr>
<tr><td>1.</td><td>ಆನೇಕಲ್</td><td>101</td><td>141</td></tr>
<tr><td>2.</td><td>ಬೆಂಗಳೂರುದಕ್ಷಿಣ</td><td>-</td><td>-</td></tr>
<tr><td>3.</td><td>ಬ್ಯಾಟರಾಯನಪುರ</td><td>-</td><td>-</td></tr>
<tr><td>4.</td><td>ದಾಸರಹಳ್ಳಿ</td><td>-</td><td>-</td></tr>
<tr><td>5.</td><td>ಕೆ.ಆರ್.ಪುರಂ</td><td>-</td><td>-</td></tr>
<tr><td>6.</td><td>ಮಹದೇವಪುರ</td><td>-</td><td>-</td></tr>
<tr><td>7.</td><td>ಯಲಹಂಕ</td><td>140</td><td>-</td></tr>
<tr><td>8.</td><td>ಯಶವಂತಪುರ</td><td>180</td><td>-</td></tr>
<tr><td colspan="2">ಒಟ್ಟು</td><td>421</td><td>141</td></tr>
</table>
</td>
</tr>
<tr>
<td>ಈ)</td>
<td>1 ಮತ್ತು 2-ಬಿಹೆಚ್‌ಕೆ ವಸತಿ ಫಲಾನುಭವಿಗಳಿಗೆ ಸರ್ಕಾರದಿಂದ ನೀಡುವ ಸಬ್ಸಿಡಿ ಎಷ್ಟು; ನಿಗಮದಿಂದಲೇ ಸಾಲದ ವ್ಯವಸ್ಥೆ ಮತ್ತು ಅವರು ಭರಿಸುವ ಮೊತ್ತವನ್ನು ಸರ್ಕಾರವೇನಾದರೂ ಮನ್ನಾ ಮಾಡುವ ಪ್ರಸ್ತಾಪವಿದೆಯೇ: (ವಿವರ ನೀಡುವುದು)</td>
<td>ಕೇಂದ್ರ ಸರ್ಕಾರವು ಪ್ರತಿ ಫಲಾನುಭವಿಗೆ ರೂ 1.50 ಲಕ್ಷಗಳ ಸಹಾಯಧನ ಒದಗಿಸುತ್ತದೆ. ರಾಜ್ಯ ಸರ್ಕಾರವು ಪ. ಜಾ/ಪ. ಪಂ. ವರ್ಗದ ಫಲಾನುಭವಿಗಳಿಗೆ ರೂ 2.00 ಲಕ್ಷಗಳು ಹಾಗೂ ಇತರೆ ವರ್ಗದ ಫಲಾನುಭವಿಗಳಿಗೆ ರೂ 1.20 ಲಕ್ಷಗಳನ್ನು ಒದಗಿಸುತ್ತದೆ. ಉಳಿದ ಮೊತ್ತವನ್ನು ಫಲಾನುಭವಿಗಳು ಭರಿಸಬೇಕಾಗುತ್ತದೆ.<br><br>ಅದರಂತೆ, ಪ.ಜಾ./ಪ.ಪಂ. ವರ್ಗದ ಫಲಾನುಭವಿಗಳು ರೂ.7.70 ಲಕ್ಷಗಳು ಹಾಗೂ ಸಾಮಾನ್ಯ/ಅಲ್ಪಸಂಖ್ಯಾತ ವರ್ಗದ ಫಲಾನುಭವಿಗಳು ರೂ.8.50 ಲಕ್ಷಗಳನ್ನು ಪಾವತಿಸಬೇಕಿರುತ್ತದೆ.<br><br>ಈ ಯೋಜನೆಯನ್ನು cross subsidization, ಖಾಸಗಿ ಸಹಭಾಗಿತ್ವ(PPP) ರಡಿ ನಿರ್ಮಿಸುತ್ತಿರುವುದರಿಂದ 2BHK ಮನೆಗಳಿಗೆ ಕೇಂದ್ರ / ರಾಜ್ಯ ಸರ್ಕಾರದ ಅನುದಾನ ಇರುವುದಿಲ್ಲ. ಘಟಕ ವೆಚ್ಚದ ಪೂರ್ಣ ಮೊತ್ತವನ್ನು ಫಲಾಭವಿಗಳೆ ಭರಿಸಬೇಕಿದ್ದು ಫಲಾಭವಿಗಳು ಇಚ್ಛಿಸಿದಲ್ಲಿ ನಿಗಮದಿಂದ ಗೃಹ ಸಾಲ ಸೌಲಭ್ಯವನ್ನು ಮಾಡಿಕೊಡಲಾಗುತ್ತದೆ.<br><br>1BHK ಫ್ಲಾಟ್ಗಳ ಫಲಾನುಭವಿಗಳು ಪಾವತಿಸಬೇಕಿರುವ ಮೊತ್ತದಲ್ಲಿ ಕನಿಷ್ಠ ರೂ.5.00 ಲಕ್ಷಗಳಿಂದ ಗರಿಷ್ಠ ರೂ.7.00 ಲಕ್ಷಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳು, ಶೆಡ್ಯೂಲ್ಡ್ ಬ್ಯಾಂಕುಗಳು ಹಾಗೂ ಎನ್.ಬಿ.ಎಫ್.ಸಿ. ಗಳಿಂದ ಗೃಹಸಾಲ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ.<br><br>ಫಲಾನುಭವಿಗಳು ಪಾವತಿಸಬೇಕಿರುವ ಮೊತ್ತವನ್ನು ಮನ್ನಾ ಮಾಡುವ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.</td>
</tr>
</table>

| | | |
|---|---|---|
| ಉ) | 1 ಬಿ.ಹೆಚ್.ಕೆ ಮತ್ತು 2-ಬಿ.ಹೆಚ್.ಕೆ ವಸತಿ ಸಮುಚ್ಚಯದಲ್ಲಿ ಒದಗಿಸುವ ಮೂಲಭೂತ ಸೌಕರ್ಯಗಳಾವುವು? (ವಿವರ ನೀಡುವುದು) | 1-ಬಿಹೆಚ್‌ಕೆ ಮತ್ತು 2-ಬಿಹೆಚ್‌ಕೆ ವಸತಿ ಸಮುಚ್ಚಯದಲ್ಲಿ ಮೂಲಭೂತ ಸೌಕರ್ಯಗಳು ಈ ಕೆಳಕಂಡಂತಿವೆ.<br><br>1. ಕುಡಿಯುವ ನೀರಿನ ವ್ಯವಸ್ಥೆ.(Including Sump Tank)<br>2. ಒಳ ಚರಂಡಿ ವ್ಯವಸ್ಥೆ (Including STP)<br>3. ರಸ್ತೆ ಮತ್ತು ಚರಂಡಿ ವ್ಯವಸ್ಥೆ.<br>4. ಸೋಲಾರ್ ಬೀದಿ ದೀಪಗಳ ವ್ಯವಸ್ಥೆ.<br>5. ಅಗ್ನಿಶಾಮಕ ವ್ಯವಸ್ಥೆ.<br>6. ಲಿಫ್ಟ್ ವ್ಯವಸ್ಥೆ. (4ನೇ ಮಹಡಿ ಮೇಲ್ಪಟ್ಟು)<br>7. ಪಾರ್ಕಿಂಗ್ ವ್ಯವಸ್ಥೆ<br>8. ಉದ್ಯಾನವನದ ವ್ಯವಸ್ಥೆ<br>9. ಮಳೆ ನೀರು ಕೊಯ್ಲು ವ್ಯವಸ್ಥೆ.<br>10. ಮಳಿಗೆಗಳ ವ್ಯವಸ್ಥೆ. |

ಸಂಖ್ಯೆ: ವಇ 200 ಹೆಚ್‌ಎಫ್‌ಎ 2024]

(ಬಿ.ಝೆಡ್ ಜಮೀರ್ ಅಹಮದ್ ಖಾನ್)
ವಸತಿ, ವಕ್ಫ್, ಮತ್ತು ಅಲ್ಪ ಸಂಖ್ಯಾತರ
ಕಲ್ಯಾಣ ಸಚಿವರು.